ದೂರಶಿಕ್ಷಣ ನಿರ್ದೇಶನಾಲಯ
**ಕನ್ನಡ ವಿಶ್ವವಿದ್ಯಾಲಯ, ಹಂಪಿ**
ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
ದೂರವಾಣಿ ೦೮೩೯೪-೨೮೦೨೦೦
ಇ-ಮೇಲ್ : dde.kuh@gmail.com

ಸಂಖ್ಯೆ:ಕವಿಹಂ:ದೂಶಿನಿ:ಸಂತ:ಸ.ಗೃಲೇ:28:2018–19/2018–19 ದಿನಾಂಕ. 30.03.2019

**ಸೂಚನೆ**

2018–19ನೇ ಶೈಕ್ಷಣಿಕ ಸಾಲಿನ ಎಂ.ಎ. **ಸಮಾಜಶಾಸ್ತ್ರ ಅಂತಿಮ** ವರ್ಷದ ವಿದ್ಯಾರ್ಥಿಗಳಿಗೆ ಈ ಮೂಲಕ ಸೂಚಿಸುವುದೇನೆಂದರೆ, **ಕೋರ್ಸ್‌ನ ಪ್ರತಿ ಪತ್ರಿಕೆಯ ಎರಡು ಸ್ವಲಿಖಿತ ಎ4 ಅಳತೆಯ ಕನಿಷ್ಠ 10 ಪುಟಗಳ ಗೃಹಲೇಖನಗಳನ್ನು** ಪ್ರತಿಯೊಬ್ಬ ವಿದ್ಯಾರ್ಥಿಯು ಕಡ್ಡಾಯವಾಗಿ ಸಿದ್ಧಪಡಿಸಿ **ದಿನಾಂಕ 30.05.2019ರ** ಒಳಗೆ ಸಲ್ಲಿಸಬೇಕು. ವಿವಿಧ ಅಧ್ಯಯನ ಮತ್ತು ವಿಸ್ತರಣ ಕೇಂದ್ರಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಆಯಾ ಅಧ್ಯಯನ ಮತ್ತು ವಿಸ್ತರಣ ಕೇಂದ್ರಗಳ ಮುಖ್ಯಸ್ಥರ ಮೂಲಕ ಸಲ್ಲಿಸುವುದು. ರೂ. 300.00ಗಳ **ದಂಡಸಹಿತ ಗೃಹಲೇಖನವನ್ನು ಸಲ್ಲಿಸಲು 15.06.2019**ರವರೆಗೆ ಕಾಲಾವಕಾಶ ಇರುತ್ತದೆ. ತಡವಾಗಿ ಸಲ್ಲಿಸಿದ ಗೃಹಲೇಖನಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. ವಿದ್ಯಾರ್ಥಿಗಳು ಸಕಾಲದಲ್ಲಿ ಗೃಹಲೇಖನಗಳನ್ನು ಸಲ್ಲಿಸದಿದ್ದಲ್ಲಿ ಈ ಸಂಬಂಧದ ಆಂತರಿಕ ಅಂಕಗಳನ್ನು ನೀಡದೆ ಫಲಿತಾಂಶ ಪ್ರಕಟಿಸಲಾಗುವುದು.

ಈ ಕೆಳಗಿನ ಐದು ಪತ್ರಿಕೆಗಳಲ್ಲಿ ಪ್ರತಿಯೊಂದರಲ್ಲೂ ಐದು ವಿಷಯಗಳನ್ನು ಕೊಡಲಾಗಿದೆ. ಇವುಗಳಲ್ಲಿ ಪ್ರತಿ ಪತ್ರಿಕೆಯಲ್ಲಿಯೂ ಎರಡು ವಿಷಯ ಕುರಿತು ಕಡ್ಡಾಯವಾಗಿ ಪ್ರತಿಯೊಂದು ವಿಷಯಕ್ಕೆ ಕನಿಷ್ಠ 10 ಪುಟಗಳ ಗೃಹಲೇಖನ ಬರೆಯಬೇಕು. ಪ್ರತಿಯೊಂದು ಪತ್ರಿಕೆಗೂ 10 ಅಂಕಗಳು ಇರುತ್ತವೆ. ಐದು ಪತ್ರಿಕೆಗಳಿಗೆ ಒಟ್ಟು 50 ಅಂಕಗಳಿರುತ್ತವೆ.

**ಗೃಹಲೇಖನ ಕಳುಹಿಸುವ ವಿಳಾಸ**

**ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ 583 276.**

**ಗೃಹಲೇಖನದ ವಿಷಯಗಳು**

**ಕೋರ್ಸ್ (ಪತ್ರಿಕೆ) – ೬ : ಆಧುನಿಕ ಸಮಾಜಶಾಸ್ತ್ರೀಯ ಸಿದ್ಧಾಂತಗಳು**

೧. ಸಮಾಜಶಾಸ್ತ್ರೀಯ ಸಿದ್ಧಾಂತದ ಪ್ರಮುಖ ಲಕ್ಷಣಗಳು
೨. ಸಾಮಾಜಿಕ ರಚನೆ ಮತ್ತು ನಿಯಮ ರಾಹಿತ್ಯತೆ
೩. ಸಾಂಕೇತಿಕ ಅಂತರಕ್ರಿಯಾ ಸಿದ್ಧಾಂತ
೪. ಇಂದ್ರಿಯಾನುಭವ ಶಾಸ್ತ್ರಕ್ಕೆ ಆಲ್‌ಫ್ರೆಡ್ ಶುಡ್ಜ್‌ರವರ ಕೊಡುಗೆ.
೫. ಕ್ರಿಯಾತ್ಮಕ ಸಂಘರ್ಷವಾದ

**ಕೋರ್ಸ್ (ಪತ್ರಿಕೆ) – ೭ : ಅಭಿವೃದ್ಧಿ ಸಮಾಜಶಾಸ್ತ್ರ**

೧. ಮಾನವ ಅಭಿವೃದ್ಧಿ ಸಮಾಜಶಾಸ್ತ್ರದ ಮಹತ್ವ
೨. ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಲಿಂಗ ಅಸಮಾನತೆ
೩. ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆಯಲ್ಲಿ ಲಿಂಗ ಸಂಬಂಧ
೪. ವಿಕೇಂದ್ರೀಕರಣ ಮತ್ತು ಸಹಭಾಗಿತ್ವ ಅಭಿವೃದ್ಧಿ
೫. ಸುಸ್ಥಿರ ಅಭಿವೃದ್ಧಿ

**ಕೋರ್ಸ್ (ಪತ್ರಿಕೆ) – ೮ : ವೈದ್ಯಕೀಯ ಸಮಾಜಶಾಸ್ತ್ರ**

೧. ವೈದ್ಯಕೀಯ ಸಮಾಜಶಾಸ್ತ್ರದ ಮಹತ್ವ ಮತ್ತು ಬೆಳವಣಿಗೆ
೨. ವೈದ್ಯಕೀಯ ವ್ಯವಸ್ಥೆ ಮತ್ತು ಸಮಾಜ
೩. ವೈದ್ಯ–ರೋಗಿ ಸಂಬಂಧ
೪. ಶುಶ್ರೂಷೆಯ ವೃತ್ತೀಕರಣ
೫. ಸಾಮಾಜಿಕ ಸಂಘಟನೆಯಾಗಿ ಆಸ್ಪತ್ರೆ

**ಕೋರ್ಸ್ (ಪತ್ರಿಕೆ) – ೯ : ಸಾಮಾಜಿಕ ನೀತಿ ಮತ್ತು ಯೋಜನೆ**

೧. ಸಾಮಾಜಿಕ ಹೊರತಳ್ಳುವಿಕೆ
೨. ನಾಗರೀಕ ಸಮಾಜ
೩. ಸಾಮಾಜಿಕ ನೀತಿ ಮತ್ತು ಮೂಲಭೂತ ಹಕ್ಕುಗಳು
೪. ಗ್ರಾಮೀಣ ಅಭಿವೃದ್ಧಿ ಯೋಜನೆಗಳು
೫. ತಳ ಹಂತದ ಯೋಜನೆಯ ಮಹತ್ವ

**ಕೋರ್ಸ್ (ಪತ್ರಿಕೆ) – ೧೦ : ಸಮಾಜ ಮತ್ತು ಜಾಗತೀಕರಣ**

೧. ಜಾಗತೀಕರಣದ ಸ್ವರೂಪ ಮತ್ತು ನಿಯೋಜನೆಗಳು
೨. ಮಹಿಳೆಯರ ಮೇಲೆ ಜಾಗತೀಕರಣದ ಪ್ರಭಾವ
೩. ಬುಡಕಟ್ಟು ಸಮುದಾಯಗಳ ಮೇಲೆ ಜಾಗತೀಕರಣದ ಪ್ರಭಾವ
೪. ಬಹುರಾಷ್ಟ್ರೀಯ ಕಂಪನಿಗಳು
೫. ಜಾಗತೀಕರಣದ ಸವಾಲುಗಳು ಮತ್ತು ಸಾಧ್ಯತೆಗಳು

ನಿರ್ದೇಶಕರು

E:dde:contact18-19/assrments/5